




## ಲಿಂಕ್ಡ್ ಇನ್ ಪಲ್ಸ್

ವೆಬ್‌ನಲ್ಲಿ ಸಾವಿರಾರು ಸುದ್ದಿ ತಾಣಗಳಿವೆ. ನಿಮಗೆ ಬೇಕಾದ ಸುದ್ದಿಯನ್ನು ಹಾಗೂ ಆಸಕ್ತಿದಾಯಕ ಲೇಖನವನ್ನು ಹುಡುಕಲು ಹೋಂ ಪೇಜ್‌ಅನ್ನು ಗಂಟೆಗಟ್ಟಲೆ ಜಾಲಾಡುತ್ತಿರ ಬೇಕಾಗುತ್ತದೆ. ಆದರೂ ಕೆಲವು ಸುದ್ದಿಗಳು ಸಿಗುವುದೇ ಇಲ್ಲ. ಆದರೆ ಲಿಂಕ್ಡ್ ಇನ್ ಪಲ್ಸ್‌ನಿಂದ ಆಕರ್ಷಕವಾದ, ಗ್ರಿಡ್ ಶೈಲಿಯ ಮೇಲ್ಮೈ ಮೇಲೆ ನಿಮಗೆ ಬೇಕಾದ ತಾಣಗಳಿಂದ ಶೀರ್ಷಿಕೆಗಳನ್ನು ನೋಡಬಹುದು. ಇದು ನಿಮ್ಮ ಲಿಂಕ್ಡ್ ಇನ್, ಫೇಸ್‌ಬುಕ್, ಯುಟ್ಯೂಬ್, ಫ್ಲಿಕರ್ ಖಾತೆಗಳ ಜೊತೆ ಸಂಪರ್ಕವನ್ನೂ ಸಾಧಿಸುತ್ತದೆ.

## ಸರ್ಕಲ್ ಆಫ್ 6

ಈ ಉಚಿತ ಆ್ಯಪ್ ನಿಮ್ಮನ್ನು ಅಪಾಯಕಾರಿ ಸನ್ನಿವೇಶಗಳಿಂದ ಕಾಪಾಡುತ್ತದೆ. ಅಂತಹ ಸಂದರ್ಭಗಳು ಎದುರಾದಾಗ ನಿಮ್ಮ ಸ್ನೇಹಿತರಿಂದ ತುರ್ತು ಸಹಾಯ ಪಡೆಯಲು ಸಾಧ್ಯ. ಈ ಆ್ಯಪ್ ಮೇಲೆ ಎರಡು ಬಾರಿ ಕುಟ್ಟುವುದರಿಂದ ಮೊದಲೇ ಬರೆದು ಸಿದ್ಧಪಡಿಸಿದ ಮೂರು ಸಂದೇಶಗಳಲ್ಲಿ ಒಂದನ್ನು ಕನಿಷ್ಠ 6 ಮಂದಿಯ ಸಂಪರ್ಕ ಸಂಖ್ಯೆಗಳಿಗೆ ಕಳಿಸುತ್ತದೆ. ಒಂದು ಸಂದೇಶವು ನೀವಿರುವ ಸ್ಥಳದ ಮಾಹಿತಿಯನ್ನು ಜಿಪಿಎಸ್ ಮೂಲಕ ಕಳಿಸಿದರೆ, ಇನ್ನೊಂದು ನಿಮ್ಮ ಸ್ನೇಹಿತರಿಗೆ ತಕ್ಷಣ ನಿಮ್ಮ ಸಂಪರ್ಕಕ್ಕೆ ಬರುವಂತೆ ಕೇಳುತ್ತದೆ.




## ಪ್ಲ್ಯೂಮ್

140 ಅಕ್ಷರಗಳಿಗಿಂತ ಹೆಚ್ಚಿನ ಅಕ್ಷರಗಳನ್ನು ಹೊಂದಿರುವ ಟ್ವೀಟ್ ಅನ್ನು ಹಾಕಲು ಹಲವು ಕ್ರಮಗಳಿವೆ. ಆದರೆ ಅತ್ಯಂತ ಕ್ರಮಬದ್ಧವಾಗಿ ಕಳಿಸುವವರಿಗೆ ಪ್ಲ್ಯೂಮ್ ಸಹಾಯ ಮಾಡುತ್ತದೆ. ಈ ಅತ್ಯಂತ ಶಕ್ತಿಯುತವಾದ ಆ್ಯಂಡ್ರಾಯ್ಡ್ ಟ್ವಿಟರ್ ಟೂಲ್ ಎಲ್ಲಾ ರೀತಿಯ ಸೆಟಿಂಗ್‌ಗಳನ್ನು ಬದಲಾವಣೆ ಮಾಡುತ್ತದೆ. ಸಂದೇಶಗಳು ಬಂದಾಗ ಮೊಬೈಲ್ ಮೇಲ್ಮೈ ಬಣ್ಣ ಕೂಡಾ ಬದಲಾಗುತ್ತದೆ. ಮ್ಯೂಟಿಂಗ್ ವ್ಯವಸ್ಥೆಯು ನಿಮ್ಮ ಟೈಮ್‌ಲೈನ್‌ನಿಂದ ಕೆಲವು ಶಬ್ದಗಳು ಬಳಕೆಯಾಗದಂತೆ ತಡೆ ಹಾಕುತ್ತದೆ.




## ಹ್ಯಾಂಗೌಟ್ಸ್




ಗೂಗ್ಲ್ ಟಾಕ್ ಇದೀಗ ಮರೆತು ಹೋದ ಆ್ಯಪ್. ಗೂಗ್ಲ್ ಹ್ಯಾಂಗೌಟ್ಸ್ ಸಂದೇಶಗಳನ್ನು ಗೂಗ್ಲ್ ಬಳಕೆದಾರರಿಗೆ ಕಳಿಸುವ ಬಳಕೆದಾರ ಸ್ನೇಹಿ ಆ್ಯಪ್. ಇದರಲ್ಲಿ ವಿಡಿಯೋ ಚ್ಯಾಟಿಂಗ್ ಕೂಡಾ ಉಚಿತವಾಗಿ ಮಾಡಬಹುದು. ಆ್ಯಂಡ್ರಾಯ್ಡ್ 4.4 ಹೊಂದಿರುವವರು ಎಸ್‌ಎಂಎಸ್ ನಿರ್ವಹಣೆಯನ್ನು ಆರಾಮವಾಗಿ ಮಾಡಬಹುದು. ಒಟ್ಟಿಗೆ 12 ಮಂದಿಯ ಜೊತೆ ವಿಡಿಯೋ ಕಾನ್ಫರೆನ್ಸ್ ಮಾಡಲು ಸಾಧ್ಯ.

■ ಎಸ್. ತುಂಬೆ